not to be printed
2nd Cover

# ನೀನಾಸಮ್ ಸಂಸ್ಕೃತಿ ಶಿಬಿರ
# ಅಕ್ಟೋಬರ್ ೨೦೦೮

೧೯೭೮ರಿಂದ ಇಲ್ಲಿಯವರೆಗೆ, ನೀನಾಸಮ್ ಸಂಸ್ಥೆಯು ಸತತವಾಗಿ ಪ್ರತಿ ಅಕ್ಟೋಬರಿನಲ್ಲಿ ಚಲನಚಿತ್ರ ಮತ್ತು ಸಂಸ್ಕೃತಿ ಶಿಬಿರಗಳನ್ನು ನಡೆಸುತ್ತ ಬಂದಿದೆ. ಈ ವರ್ಷದ ಸಂಸ್ಕೃತಿ ಶಿಬಿರವೂ ಅದೇ ಮಾದರಿಯಲ್ಲಿ ಯೋಜಿತವಾಗಿದೆ. ಡಾ. ಯು.ಆರ್. ಅನಂತಮೂರ್ತಿ ಅವರು ನಿರ್ದೇಶಕರಾಗಿರುವ ಈ ಬಾರಿಯ ಶಿಬಿರವು 'ಮನೋಭೂಮಿಕೆಯಲ್ಲಿ ಸ್ವರಾಜ್ಯ' ಎಂಬ ವಿಷಯ ಕುರಿತು ಸ್ಥೂಲವಾಗಿ ಕೇಂದ್ರೀಕರಿಸುತ್ತದೆ. ಈ ವರ್ಷಕ್ಕೆ ಶತಮಾನ ತುಂಬುತ್ತಿರುವ ಮಹಾತ್ಮ ಗಾಂಧಿಯವರ ಪ್ರಸಿದ್ಧ ಪುಸ್ತಕ 'ಹಿಂದ್ ಸ್ವರಾಜ್'ನ ನೆನಪಿನಲ್ಲಿ ಈ ವಿಷಯವನ್ನು ಆಯ್ಕೆ ಮಾಡಿದ್ದು ಈ ಪುಸ್ತಕದ ವಾದಗಳ ಹಿನ್ನೆಲೆಯಲ್ಲಿ ಇವತ್ತು ಸ್ವರಾಜ್ಯ ಎಂಬ ಪರಿಕಲ್ಪನೆಯನ್ನು ಕುರಿತ ಮರುಚಿಂತನೆಯೊಂದನ್ನು ನಡೆಸುವುದು ಇದರ ಉದ್ದೇಶ. ಅದರಲ್ಲೂ ಮುಖ್ಯವಾಗಿ ಸ್ವರಾಜ್ಯವೆಂಬ ಪರಿಕಲ್ಪನೆಯು ಇವತ್ತಿನ ನಾಗರಿಕರ ಮನೋಭೂಮಿಕೆಯೊಳಗೆ ಮತ್ತು ಕಲಾಪ್ರಕಾರಗಳಲ್ಲಿ ಹೇಗೆಲ್ಲ ಮರುರೂಪ ಪಡೆಯಲು ಸಾಧ್ಯವಿದೆ ಎಂಬುದನ್ನು ಪರಿಶೀಲಿಸುವ ಇರಾದೆ ಈ ಬಾರಿಯ ಶಿಬಿರದ್ದು.

ಈ ವಿಷಯಕ್ಕೆ ಸಂಬಂಧಿಸಿ, ಹಲವು ಉಪನ್ಯಾಸ-ಚರ್ಚೆಗಳು ಈ ಶಿಬಿರದುದ್ದಕ್ಕೂ ನಡೆಯಲಿದ್ದು, ಡಾ. ಯು.ಆರ್. ಅನಂತಮೂರ್ತಿ, ಶ್ರೀಮತಿ ಮೇಧಾ ಪಾಟ್ಕರ್, ಡಾ. ವಂದನಾ ಶಿವ, ಡಾ. ವಿನಯ ಲಾಲ್, ಡಾ. ಶಿವ ವಿಶ್ವನಾಥನ್, ಡಾ. ಸುಬ್ರತೋ ಬಾಗ್ಚಿ, ಶ್ರೀ ಮನು ಚಕ್ರವರ್ತಿ, ಡಾ. ರಾಹುಲ ರಾಮಗುಂಡಮ್ ಮೊದಲಾದ ಗಣ್ಯರು ಈ ಉಪನ್ಯಾಸ-ಸಂವಾದಗಳನ್ನು ನಡೆಸಲಿದ್ದಾರೆ.

ಇದರ ಮುಂದುವರಿಕೆಯಾಗಿ, ಕಲೆ ಮತ್ತು ಸಮಾಜದ ವಿಭಿನ್ನ ಸ್ತರಗಳಲ್ಲಿ ವ್ಯಕ್ತವಾಗುತ್ತಿರುವ ಸ್ವರಾಜ್ಯ ಪರಿಕಲ್ಪನೆಗಳ ಸಮಸ್ಯೆ ಮತ್ತು ಆವಿಷ್ಕಾರ ಕುರಿತು ನಡೆಯಲಿರುವ ಚರ್ಚೆಗಳಲ್ಲಿ – ಶ್ರೀ ಸುಂದರ ಸಾರುಕ್ಕೈ, ಡಾ. ರಾಜೇಂದ್ರ ಚೆನ್ನಿ, ಶ್ರೀ ಗಿರೀಶ ಕಾಸರವಳ್ಳಿ, ಶ್ರೀ ವಿವೇಕ ಶಾನಭಾಗ, ಶ್ರೀ ಮನು ದೇವದೇವನ್, ಡಾ. ಚಂದ್ರಶೇಖರ ಕಂಬಾರ, ಡಾ. ಎಚ್.ಎಸ್. ವೆಂಕಟೇಶ ಮೂರ್ತಿ, ಶ್ರೀ ಮುಜಫ್ಫರ್ ಅಸಾದಿ, ಶ್ರೀ ಡಿ.ಎಸ್. ನಾಗಭೂಷಣ, ಡಾ. ಜೆ. ಸದಾನಂದ, ಶ್ರೀ ಅಶೋಕ ಹೆಗಡೆ, ಶ್ರೀ ಅಬ್ದುಲ್ ರಶೀದ್, ಶ್ರೀ ಎಂ.ಕೆ. ರಾಘವೇಂದ್ರ – ಮೊದಲಾದವರು ಪಾಲ್ಗೊಳ್ಳಲಿದ್ದಾರೆ.

ಜತೆಗೆ, ಪ್ರತಿ ಶಿಬಿರಗಳಲ್ಲೂ ನಡೆಯುವಂತೆ, ಕಲಾಸಹೃದಯತೆಗೆ ಸಂಬಂಧಿಸಿ ತಿರುಗಾಟ ನಾಟಕಗಳ ಚರ್ಚೆಯೇ ಅಲ್ಲದೆ, ಕಾವ್ಯ-ಸಂಗೀತ-ಚಲನಚಿತ್ರ ರಸಗ್ರಹಣ ಕಾರ್ಯಕ್ರಮಗಳೂ ನಡೆಯಲಿವೆ.

ಜತೆಗೆ, ಈ ದಿನಗಳಲ್ಲಿ, ಪ್ರತಿ ಸಂಜೆ ನಡೆಯುವ ಸಂಸ್ಕೃತಿ ಉತ್ಸವದ ಕಾರ್ಯಕ್ರಮಗಳ ಪಟ್ಟಿ ಮತ್ತು ಪರಿಚಯ ಮುಂದಿನ ಪುಟಗಳಲ್ಲಿದೆ.

ನೀನಾಸಮ್, ಹೆಗ್ಗೋಡು, ಸಾಗರ, ಕರ್ನಾಟಕ ೫೭೭ ೪೧೭

not to be printed
3rd Cover

# NINASAM CULTURE COURSE 2008

The Culture Course has been one of Ninasam's major annual events for the last two decades. Held over 7 days every October, The Course is designed around a specific theme every year, and organised as a combination of special lectures on the theme, lecture-demonstration-discussions on fundamentals of appreciation of art forms like literature, theatre, film, music, dance, and so on -- all this during the day-sessions, and a series of cultural programmes in the evenings. The evening festival this year consists of the following programmes:

- **5th October, Sunday:** Ninasam Tirugata Performance - ***Swayamvaraloka;*** Directed by Akshara K.V.
- **6th October, Monday:** Ninasam Tirugata Performance - ***Nata Narayani;*** Directed by Nataraja Honnavalli
- **7th October, Tuesday:** Ninasam Performances - ***Lear Lahari;*** based on Shakespeare's *King Lear*, Directed by Akshara K.V. and ***Saddu Vicharane Nadeyuttide...;*** Translation of Vijay Tendulkar, Directed by Prakash Belawadi
- **8th October, Wednesday:** Karnatic Vocal Recital by **O.S. Thyagarajan,** Chennai
- **9th October, Thursday:** Hindustani Vocal Recital by **Pt. Jayatirtha Mevundi,** Hubli
- **10th October, Friday:** Performance - **Crossings**, by **Ranan,** Kolkata
- **11th October, Saturday:** Yakshagana Performance **Sita Kalyana,** by selected artists, Mangalore

Ninasam, Heggodu, Sagara
Karnataka 577 417

not to be
printed
Page 1

**ಅಕ್ಟೋಬರ್ ೫ ಭಾನುವಾರ**

photo to be printed here
see cd for the photo with this file no.

**05CC08**

ತಿರುಗಾಟ ನಾಟಕ

## ಸ್ವಯಂವರಲೋಕ

ಅಕ್ಷರ ಕೆ.ವಿ. ಅವರ ಹೊಸ ಕನ್ನಡ ನಾಟಕ

**ವಿನ್ಯಾಸ ಮತ್ತು ನಿರ್ದೇಶನ: ಅಕ್ಷರ ಕೆ.ವಿ.**

ಈ ಹೊಸ ಕನ್ನಡ ನಾಟಕವು ಕರ್ನಾಟಕದ ಪಶ್ಚಿಮಘಟ್ಟಗಳ ನಡುವಿನ ಮೂಲೆಯ ಹಳ್ಳಿಯೊಂದರಲ್ಲಿ ನಡೆಯುವ ಸಮಕಾಲೀನ ಕಥೆಯೊಂದನ್ನು ಮುಂದಿಡುತ್ತದೆ. ಅಲ್ಲಿ ಹರಿಯುವ ನದಿಗೆ ಅಣೆಕಟ್ಟನ್ನು ಕಟ್ಟಿರುವುದರಿಂದ ಆ ಭಾಗವು ದ್ವೀಪವಾಗಿದೆ; ಹಾಗಾಗಿ, ಅಲ್ಲಿದ್ದ ಜನರಲ್ಲಿ ಹೆಚ್ಚಿನವರು ಈಗ ಊರುಬಿಟ್ಟು ದೇಶದೇಶಾಂತರಕ್ಕೆ ಹೋಗಿದ್ದಾರೆ; ಬೆರಳೆಣಿಕೆಯಷ್ಟು ಜನ ಮಾತ್ರ ಅಲ್ಲಿ ಉಳಿದಿದ್ದಾರೆ. ಹಾಗೆ ಅಲ್ಲಿ ಉಳಿದಿರುವ ಒಂದು ಹವ್ಯಕ ಕುಟುಂಬದೊಳಗೆ ನಡೆಯುವ ವಿದ್ಯಮಾನಗಳನ್ನು ಈ ನಾಟಕ ಕೇಂದ್ರೀಕರಿಸುತ್ತದೆ. ಆದರೆ, ಈ ನಾಟಕವು ಬೆಳೆಯುತ್ತ ಹೋದಂತೆ ಅದರ ಕಥಾವ್ಯಾಪ್ತಿಯು ಕಣ್ಮರೆಯಾಗುತ್ತಿರುವ ಆ ಊರಿನ ಜಗತ್ತಿನ ಬಗ್ಗೆ ಮಾತ್ರವಲ್ಲದೆ, ಅಕಸ್ಮಾತ್ತಾಗಿ ಹೊರಜಗತ್ತಿಗೂ ತೆರೆದುಕೊಳ್ಳಲು ಆರಂಭಿಸುತ್ತದೆ. 'ಒಂದು ಅಸಂಭವನೀಯ ಅನ್ಯೋಕ್ತಿ' ಎಂದು ಲೇಖಕರು ಕರೆದಿರುವ ಈ ನಾಟಕದ ದ್ವಿತೀಯಾರ್ಧದಲ್ಲಿ ಅಲ್ಲಿಯ ಹುಡುಗಿಯೊಬ್ಬಳನ್ನು ಮದುವೆಯಾಗಲು ದೇಶವಿದೇಶದ ಕನ್ಯಾರ್ಥಿಗಳು ಬರುತ್ತಾರೆ; ಅವರೊಂದಿಗೆ ನಡೆಯುವ ಸ್ವಯಂವರಕ್ಕೆ ಹಿನ್ನೆಲೆಯಾಗಿ ಮತ್ತು ಮುನ್ನೆಲೆಯಾಗಿ ನಾನಾ ಬಗೆಯ ವಿದ್ಯಮಾನಗಳು ಬಿಚ್ಚಿಕೊಳ್ಳುತ್ತವೆ. ಹೀಗೆ, ವಾಸ್ತವ ಮತ್ತು ವಾಸ್ತವೇತರದ ನಡುವೆ ಸೇತುವೆಯಂತಿರುವ ಈ ನಾಟಕ ಇವತ್ತಿನ ಕಾಲದ ಭಾರತಕ್ಕೆ ಒಂದು ರೂಪಕವಾಗಲು ಹವಣಿಸುವಂಥದು.

ಇದನ್ನು ರಂಗಕ್ಕೆ ತರುವ ಮೂಲಕ ನಾಟಕ-ಕಥನ-ಅಭಿನಯಗಳೆಲ್ಲದರ ಹೊಸ ದಿಗಂತಗಳನ್ನು ಹುಡುಕುವ ಪ್ರಯತ್ನ ಈ ಪ್ರಯೋಗದ ಹಿಂದಿದೆ.

**ಸಂಜೆ ೭ ಗಂಟೆಗೆ**

not to be
printed
Page 2

**ಅಕ್ಟೋಬರ್ ೬ ಸೋಮವಾರ**

photo to be printed here
see cd for the photo with this file no.

**06CC08**

ತಾಲೀಮಿನ ಚಿತ್ರ

ತಿರುಗಾಟ ನಾಟಕ

## ನಟ ನಾರಾಯಣಿ

ಶಂಕರ ಮೊಕಾಶಿ ಪುಣೇಕರ್ ಅವರ ಕಾದಂಬರಿ ಆಧಾರಿತ

**ರೂಪಾಂತರ ಮತ್ತು ನಿರ್ದೇಶನ: ನಟರಾಜ ಹೊನ್ನವಳ್ಳಿ**

ಕನ್ನಡ ಕಾದಂಬರಿಕಾರ ಶಂಕರ ಮೊಕಾಶಿ ಪುಣೇಕರ್ ಅವರ ಇದೇ ಹೆಸರಿನ ಕಾದಂಬರಿಯನ್ನಾಧರಿಸಿದ ರಂಗರೂಪ ಈ ನಾಟಕ. ಕಂಪೆನಿ ನಾಟಕದ ಉತ್ತುಂಗದಲ್ಲಿ ಮೂಕಿಚಿತ್ರಗಳು ಕಾಲಿಡತೊಡಗಿದ ಸಂಧಿಕಾಲವನ್ನು ಭಿತ್ತಿಯಾಗಿಟ್ಟುಕೊಂಡ ಈ ಕಥಾನಕವು ಸ್ತ್ರೀಪಾತ್ರಧಾರಿ ನಟನೊಬ್ಬನ ಬದುಕಿನ ರೋಚಕ ತಿರುವುಗಳನ್ನೂ ಆತನ ಅಂತರಂಗದ ತುಮುಲಗಳನ್ನೂ ಪತ್ತೇದಾರಿ ಕ್ರಮದಲ್ಲಿ ಮುಂದಿಡುತ್ತ, ಆ ಕಾಲದ ಸಮಾಜ-ಸಂಸ್ಕೃತಿಗಳಿಗೆ ಹೊಸ ಬಗೆಯ ಪ್ರತಿಸ್ಪಂದನೆಯೊಂದನ್ನು ನೀಡಹೊರಡುತ್ತದೆ.

ಒಂದು ಕಡೆಗೆ ಈ ಕೃತಿಯ ಕಥನಲೋಕವು ಆ ಕಾಲದ ಕಂಪೆನಿ ನಾಟಕ, ಅನಂತರ ಬಂದ ಸಿನೆಮಾಗಳು, ಮತ್ತು ಇವೆಲ್ಲಕ್ಕೂ ಕಾರಣವಾಗಿದ್ದ ವಸಾಹತುಶಾಹಿ ಸನ್ನಿವೇಶಗಳತ್ತ ತಿರುಗಿದ್ದರೆ, ಇನ್ನೊಂದು ನೆಲೆಯಲ್ಲಿ ಇದು ನಾಣಿ ಎಂಬಾತನ ವ್ಯಕ್ತಿತ್ವದ ರೂಪಾಂತರಗಳ ಕಥನ. ಮೊದಲು ಮಡಿವಂತರ ಮನೆಯೊಂದರಲ್ಲಿ ಅಡಿಗೆ ಭಟ್ಟನಾಗಿದ್ದ ಈತ ತನ್ನ ಹಾಡುಗಾರಿಕೆಯಿಂದ ನಟನಾಗುವುದು, ಅಲ್ಲಿ ಸ್ತ್ರೀಪಾತ್ರಗಳನ್ನು ಮಾಡುತ್ತ ಕಡೆಗೆ ಗಂಡು ವೇಶ್ಯೆಯೇ ಆಗುವುದು, ಆಮೇಲೆ ಗಾಂಜಾ ಅಫೀಮಿನ ಕಳ್ಳದಂಧೆಯಲ್ಲಿ ಸಿಲುಕಿ ಅಂತರ್ರಾಷ್ಟ್ರೀಯ ವ್ಯಾಪ್ತಿಯ ಅಧೋಲೋಕಕ್ಕೆ ಸೇರಿಹೋಗುವುದು ಈ ವ್ಯಕ್ತಿತ್ವ ರೂಪಾಂತರಗಳ ಸ್ಥೂಲ ನಕ್ಷೆ.

ಕನ್ನಡದ ಇಂಥ ವಿಶಿಷ್ಟ ಕಾದಂಬರಿಯೊಂದಕ್ಕೆ ಸಮಾನಾಂತರವಾದ ರಂಗರೂಪವೊಂದನ್ನು ಕಟ್ಟಿ, ಆ ಮೂಲಕ ಇವತ್ತಿನ ಕಣ್ಣಿನಿಂದ ಈ ಕೃತಿಗೆ ಪ್ರತಿಸ್ಪಂದಿಸುವ ಉದ್ದೇಶದೊಡನೆ ಪ್ರಸ್ತುತ ಪ್ರಯೋಗ ರೂಪಿತವಾಗಿದೆ.

**ಸಂಜೆ ೭ ಗಂಟೆಗೆ**

not to be
printed
Page 3

ಅಕ್ಟೋಬರ್ ೭ ಮಂಗಳವಾರ

photo to be printed here
see cd for the photo with this file no.

**07CC08**

ನೀನಾಸಮ್ ನಾಟಕ

## ಲಿಯರ್ ಲಹರಿ

ಶೇಕ್‌ಸ್ಪಿಯರ್‌ನ ‘ಕಿಂಗ್ ಲಿಯರ್’ ನಾಟಕದ ಕನ್ನಡ ಕಿರುರೂಪ

ಅನುವಾದ: ಅಕ್ಷರ ಕೆ.ವಿ.

**ವಿನ್ಯಾಸ ಮತ್ತು ನಿರ್ದೇಶನ: ಅಕ್ಷರ ಕೆ.ವಿ.**

ಶೇಕ್‌ಸ್ಪಿಯರನ ‘ಕಿಂಗ್ ಲಿಯರ್’ನಿಂದ ಪ್ರಧಾನ ಪಾತ್ರ ಲಿಯರ್‌ನನ್ನು ಎತ್ತಿಕೊಂಡು, ಆ ಪಾತ್ರದ ಮನೋಪಾತಳಿಯ ಮಜಲುಗಳನ್ನು ಹುಡುಕುವ ಪ್ರಯೋಗ ಇದು. ಮುದಿತನದ ಕಷ್ಟಕೋಟಲೆಗಳು ಮತ್ತು ಅದನ್ನು ನಿಭಾಯಿಸಲು ಮನುಷ್ಯರು ಮಾಡುವ ಪ್ರಯೋಗ- ಪ್ರಯತ್ನಗಳು – ಇವು ಆ ಪಾತ್ರದ ಮುಖ್ಯ ಹುಡುಕಾಟ. ಪ್ರಭುತ್ವವನ್ನು ಕಳೆದುಕೊಂಡು ಮನುಷ್ಯನಾಗುವ ಲಿಯರ್, ಹುಚ್ಚು ಹತ್ತಿದ ಬಳಿಕ ವಿವೇಕವನ್ನು ಗಳಿಸತೊಡಗುವ ಲಿಯರ್ – ಇವರಿಬ್ಬರೂ ಸಾಕ್ಷಾತ್ಕಾರಗೊಳ್ಳುವುದು ಮುದಿಯಾದ ಮೇಲೆ ಮಗುತನವನ್ನು ಗಳಿಸುವ ಲಿಯರನ ವ್ಯಕ್ತಿತ್ವದಲ್ಲಿ. ಅಂಥ ಪರಿಪಾಕದ ಕಥನವು, ಇವತ್ತಿನ ಕಾಲದ ಹಲವು ಗೃಹೀತಸತ್ಯಗಳನ್ನು ಪ್ರಶ್ನಿಸುವಂತಿದೆ – ಯೌವನವೇ ಸರ್ವೋತ್ಕೃಷ್ಟವೆಂದು ಭಾವಿಸುವ, ಅಧಿಕಾರವೇ ವ್ಯಕ್ತಿತ್ವವೆಂದು ನಂಬುವ ಮತ್ತು ಮಾತಿಗೆ ಮರುಳಾಗಿ ಮೌನದ ಅರ್ಥಗಳನ್ನು ಗ್ರಹಿಸಲು ಸೋಲುವ ಇಂದಿನ ನಮ್ಮ ನಾಗರಿಕ-ರೋಗಗಳೆಲ್ಲ ಈ ಕಥನದಲ್ಲಿ ತಲೆಕೆಳಗಾಗಿ ಹೊಸ ಯೋಚನೆಗೆ ನಮ್ಮನ್ನು ಆಹ್ವಾನಿಸುತ್ತವೆ. ಅಂಥ ಹೊಸ ಯೋಚನೆಗಳನ್ನು ರಂಗರೂಪಕಗಳ ಮೂಲಕ ಮಾಡುವ ಒಂದು ಪ್ರಯತ್ನ ಈ ಪುಟ್ಟ ರಂಗಕೃತಿಯ ಹಿಂದಿದೆ.

ಲೇಖಕರೂ ನಟರೂ ಆದ ಶ್ರೀ ಜಿ.ಕೆ. ಗೋವಿಂದ ರಾವ್ ಅವರೊಂದಿಗೆ ನೀನಾಸಮ್ ಸದಸ್ಯರು ಕೂಡಿ ಪ್ರಸ್ತುತಪಡಿಸುತ್ತಿರುವ ಪ್ರಯೋಗ ಇದು.

**ಸಂಜೆ ೭ ಗಂಟೆಗೆ**

not to be
printed
Page 4

ಅಕ್ಟೋಬರ್ ೭ ಮಂಗಳವಾರ

photo to be printed here
see cd for the photo with this file no.

**07aCC08**

ನೀನಾಸಮ್ ನಾಟಕ

## ಸದ್ದು, ವಿಚಾರಣೆ ನಡೆಯುತ್ತಿದೆ...

ವಿಜಯ ತೆಂಡೂಲ್ಕರ್ ನಾಟಕದ ಕನ್ನಡ ಅನುವಾದ

ಅನುವಾದ: ಚಂದ್ರಕಾಂತ ಕುಸನೂರ

**ನಿರ್ದೇಶನ: ಪ್ರಕಾಶ ಬೆಳವಾಡಿ**

ಹೆಸರೇ ಹೇಳುವಂತೆ ಈ ನಾಟಕವು ಒಂದು ‘ವಿಚಾರಣೆ’ಯ ಕಥೆ. ಮಹಾರಾಷ್ಟ್ರದ ಪುಟ್ಟ ಪೇಟೆಯ ಸಮುದಾಯವೊಂದು ಅಲ್ಲಿಯ ಸಭಾಭವನದಲ್ಲಿ ನಾಟಕವಾಡಲು ಸಿದ್ಧತೆ ನಡೆಸಿದೆ; ಅದರ ತಾಲೀಮು ನಡೆಯುವಾಗ ಕ್ರಮೇಣ ನಾಟಕಕ್ಕೂ ಪಾತ್ರಗಳ ನಿತ್ಯಬದುಕಿಗೂ ನಡುವೆ ವ್ಯತ್ಯಾಸ ಅಳಿಯುತ್ತದೆ; ಮತ್ತು, ಆ ಮೂಲಕ ಇಡಿಯ ಸಮೂಹವೇ ಸ್ತ್ರೀಪಾತ್ರಧಾರಿ ಬೆಣಾರೆಯ ಮೇಲೆ ಆರೋಪ ಹೊರಿಸಿ ಆಕೆಯನ್ನು ತಪ್ಪಿತಸ್ಥಳನ್ನಾಗಿ ಸಾಬೀತು ಮಾಡುತ್ತದೆ – ನಾಟಕವೊಂದರ ಮೂಲಕ ಹೀಗೆ ನಿಜ-ಜೀವನ-ನಾಟಕದ ಪೂರ್ವಾಗ್ರಹಗಳೂ ಮತ್ತು ಕಲ್ಪಿತಪಾತ್ರಗಳ ಮೂಲಕ ನಿಜಸಮಾಜದ ಹಿಂಸೆಗಳೂ ಕಾಣಿಸಿಕೊಂಡು ಬದುಕೇ ನ್ಯಾಯಾಲಯವಾಗಿ ಪರಿವರ್ತಿತವಾಗುವ ವಿಪರ್ಯಾಸವನ್ನು ಈ ಕೃತಿ ಎತ್ತಿ ತೋರಿಸುತ್ತದೆ. ಪ್ರಸ್ತುತ ಪ್ರಯೋಗವು ಈ ಇಡೀ ಕಥನವನ್ನು ಸಮಕಾಲೀನ ವಿದ್ಯುನ್ಮಾನ ಮಾಧ್ಯಮಗಳಿಗಾಗಿ ನಡೆಯುವ ಒಂದು ಅಣಕು ವಿಚಾರಣೆ ಎಂಬ ಹೊಸದೊಂದು ಚೌಕಟ್ಟಿನೊಳಗೆ ಕೂರಿಸುತ್ತದೆ. ಮತ್ತು ಆ ಮೂಲಕ ಹಲವು ದಶಕಗಳಷ್ಟು ಹಳೆಯದಾದ ಈ ಕೃತಿಯ ಆಶಯವನ್ನು ಇವತ್ತಿನ ಕಾಲದಲ್ಲಿಟ್ಟು ನೋಡುವ ಪ್ರಯೋಗ ಮಾಡುತ್ತಿದೆ.

ಹೆಗ್ಗೋಡು ಮತ್ತು ಸುತ್ತಮುತ್ತಲಿನ ಊರುಗಳ ನೀನಾಸಮ್ ಸಂಸ್ಥೆಯ ಸದಸ್ಯರು, ಈ ವರ್ಷವೂ ಕೂಡಿ ಪ್ರಸ್ತುತಪಡಿಸುತ್ತಿರುವ ಪ್ರಯೋಗ ಇದು.

**ಸಂಜೆ ೬.೩೦ ಗಂಟೆಗೆ**

not to be printed

Page 5

## ಅಕ್ಟೋಬರ್ ೮ ಬುಧವಾರ

photo to be printed here
see cd for the photo with this file no.

**08CC08**

ಕರ್ನಾಟಕ ಸಂಗೀತ ಗಾಯನ

# ವಿ। ಒ.ಎಸ್. ತ್ಯಾಗರಾಜನ್

**ಚೆನ್ನೈ**

ಮತ್ತು ಸಹಕಲಾವಿದರಿಂದ

ಕಳೆದ ೪೫ ವರ್ಷಗಳಿಂದ ಕಾರ್ಯಕ್ರಮಗಳನ್ನು ನೀಡುತ್ತಿರುವ ವಿ। ಒ.ಎಸ್. ತ್ಯಾಗರಾಜನ್ ಅವರು ಕರ್ನಾಟಕ ಸಂಗೀತದ ಹಿರಿಯ ತಲೆಮಾರಿನ ಕಲಾವಿದರಲ್ಲಿ ಪ್ರಮುಖರು; ವಿಸ್ತ್ರತವಾದ ರಾಗಾಲಾಪನೆ ಮತ್ತು ಶಾಸ್ತ್ರೀಯ ಸಂಪ್ರದಾಯಬದ್ಧತೆಗಳಿಗೆ ಇವರು ಹೆಸರಾದವರು. ಶ್ರೀಯುತರುಗಳಾದ ಒ.ವಿ. ಸುಬ್ರಹ್ಮಣ್ಯಮ್, ಲಾಲ್‌ಗುಡಿ ಜಯರಾಮನ್ ಮತ್ತು ಟಿ.ಎಂ. ತ್ಯಾಗರಾಜನ್ ಅವರಿಂದ ಸಂಗೀತಾಭ್ಯಾಸವನ್ನು ಪಡೆದ ಇವರು ತಮ್ಮ ೧೭ನೆಯ ವಯಸ್ಸಿನಲ್ಲಿ ಮೊದಲ ಸಾರ್ವಜನಿಕ ಕಾರ್ಯಕ್ರಮ ನೀಡಿದರು.

ಅಲ್ಲಿಂದ ಇಂದಿನವರೆಗೆ ಭಾರತದಾದ್ಯಂತ ಇವರ ಸಂಗೀತ ಕಛೇರಿಗಳು ನಡೆದಿವೆ; ಆಕಾಶವಾಣಿ-ದೂರದರ್ಶನಗಳಲ್ಲಿಯೂ ಹಲವು ಬಾರಿ ಇವರ ಕಾರ್ಯಕ್ರಮಗಳು ಪ್ರಸಾರಗೊಂಡಿವೆ. ಅಮೇರಿಕಾ, ಕೆನಡಾ, ಇಂಗ್ಲೆಂಡ್, ಜರ್ಮನಿ, ಫ್ರಾನ್ಸ್, ಸ್ವಿಟ್ಸರ್ಲೆಂಡ್, ಸಿಂಗಾಪುರ ಮತ್ತು ಆಸ್ಟ್ರೇಲಿಯಾ ಸೇರಿದಂತೆ ವಿದೇಶಗಳಲ್ಲಿಯೂ ಬಹುಸಂಖ್ಯೆಯ ಇವರ ಕಾರ್ಯಕ್ರಮಗಳು ನಡೆದಿವೆ. ಮ್ಯೂಸಿಕ್ ಅಕಾಡೆಮಿ, ಕೃಷ್ಣಗಾನ ಸಭಾ ಮೊದಲಾದ ಸಂಸ್ಥೆಗಳು ಇವರನ್ನು ಪುರಸ್ಕರಿಸಿವೆ; ಸಂಗೀತ ಚೂಡಾಮಣಿ, ಸಂಗೀತ ಕಲಾಸಾಗರ, ನಾದಭೂಷಣಮ್ ಮೊದಲಾದ ಹಲವು ಬಿರುದುಗಳು ಇವರಿಗೆ ಸಂದಿವೆ.

ಪ್ರಸ್ತುತ ಕಾರ್ಯಕ್ರಮದಲ್ಲಿ ವಿ। ಒ.ಎಸ್. ತ್ಯಾಗರಾಜನ್ ಅವರೊಡನೆ ಪಾಲ್ಗೊಳ್ಳುವ ಸಹಕಲಾವಿದರು – ಶ್ರೀ ಮೈಸೂರು ವಿ. ಶ್ರೀಕಾಂತ್ (ವಯೋಲಿನ್) ಮತ್ತು ಶ್ರೀ ತ್ರಿವೇಂಡ್ರಮ್ ವಿ. ಬಾಲಾಜಿ (ಮೃದಂಗಮ್).

**ಸಂಜೆ ೮.೩೦ ಗಂಟೆಗೆ**

not to be printed

Page 6

## ಅಕ್ಟೋಬರ್ ೯ ಗುರುವಾರ

photo to be printed here
see cd for the photo with this file no.

**09CC08**

ಹಿಂದುಸ್ತಾನಿ ಸಂಗೀತ ಗಾಯನ

# ಪಂ। ಜಯತೀರ್ಥ ಮೇವುಂಡಿ

ಮತ್ತು ಸಹಕಲಾವಿದರಿಂದ

ಸಂಗೀತದ ಜಗತ್ತಿಗೆ ಹಲವು ಪ್ರತಿಭಾವಂತ ಕಲಾವಿದರನ್ನು ಕೊಟ್ಟಿರುವ ಧಾರವಾಡದ ನೆಲದಿಂದ ಬಂದ ಪಂ। ಜಯತೀರ್ಥ ಮೇವುಂಡಿ ಅವರು ಇವತ್ತು ಕಿರಾನಾ ಘರಾಣೆಯನ್ನು ಸಮರ್ಥವಾಗಿ ಮುಂದುವರೆಸುತ್ತಿರುವ ಯುವ ಸಂಗೀತಗಾರರಲ್ಲಿ ಪ್ರಮುಖರು. ಮೊದಲ ಹತ್ತು ವರ್ಷ ಗ್ವಾಲಿಯರ್ ಘರಾಣೆಯ ಗುರು ಪಂ। ಅರ್ಜುನಸಾ ನಾಕೋಡ ಅವರಿಂದ ಸಂಗೀತಾಭ್ಯಾಸ ಮಾಡಿದ ಇವರು ಬಳಿಕ ಭೀಮಸೇನ ಜೋಷಿಯವರ ಶಿಷ್ಯ ಪಂ। ಶ್ರೀಪತಿ ಪಡೆಗಾರ್ ಅವರಿಂದಲೂ ಮಾರ್ಗದರ್ಶನ ಪಡೆದರು.

೧೯೮೯ರಲ್ಲೇ ಆಕಾಶವಾಣಿಯ ಗಾಯನ ಸ್ಪರ್ಧೆಯಲ್ಲಿ ಬಹುಮಾನ ಗಳಿಸಿ ಗಮನ ಸೆಳೆದ ಪಂ। ಮೇವುಂಡಿ ಅವರು ಅಲ್ಲಿಂದ ಇಲ್ಲಿಯವರೆಗೆ ಆಕಾಶವಾಣಿಯೂ ಸೇರಿದಂತೆ ಹಲವು ಕಡೆ ಕಾರ್ಯಕ್ರಮಗಳನ್ನು ನೀಡುತ್ತ ಬಂದಿದ್ದಾರೆ. ಮೈಸೂರು ದಸರಾ, ಪುಣೆಯ ಸವಾಯಿ ಗಂಧರ್ವ ಉತ್ಸವ, ಗ್ವಾಲಿಯರಿನ ತಾನ್‌ಸೇನ್ ಸಮಾರೋಹ ಮೊದಲಾದ ಪ್ರತಿಷ್ಠಿತ ವೇದಿಕೆಗಳಲ್ಲಿ ಹಾಡಿರುವ ಇವರು ದೆಹಲಿ, ಮುಂಬಯಿ ಸೇರಿದಂತೆ ರಾಷ್ಟ್ರದ ಹಲವೆಡೆ ಕಾರ್ಯಕ್ರಮ ನೀಡಿದ್ದಾರೆ; ದೂರದರ್ಶನದಲ್ಲೂ ಆಗಾಗ ಇವರ ಕಾರ್ಯಕ್ರಮಗಳು ನಡೆದಿವೆ. ಯಂಗ್ ಮೇಸ್ಟ್ರೋ ಅವಾರ್ಡ್ ಸೇರಿದಂತೆ ಹಲವು ಪ್ರಖ್ಯಾತ ಸನ್ಮಾನಗಳನ್ನೂ ಇವರು ಈವರೆಗೆ ಪಡೆದುಕೊಂಡಿದ್ದಾರೆ.

ಪ್ರಸ್ತುತ ಕಾರ್ಯಕ್ರಮದಲ್ಲಿ, ಪಂ. ಜಯತೀರ್ಥ ಮೇವುಂಡಿ ಅವರೊಂದಿಗೆ ಪಾಲ್ಗೊಳ್ಳುವ ಸಹಕಲಾವಿದರು – ಶ್ರೀ ಹಿರೇಮಠ (ಹಾರ್ಮೋನಿಯಂ) ಮತ್ತು ಶ್ರೀ ಶ್ರೀಧರ ಮಾಂಡ್ರೆ (ತಬಲಾ).

**ಸಂಜೆ ೭ ಗಂಟೆಗೆ**

not to be printed

Page 7

**ಅಕ್ಟೋಬರ್ ೧೦ ಶುಕ್ರವಾರ**

photo to be printed here
see cd for the photo with this file no.

**10CC08**

ನೃತ್ಯನಾಟಕ

## ಕ್ರಾಸಿಂಗ್ಸ್

ಶೇಕ್ಸ್‌ಪಿಯರನ ಪಾತ್ರ ಲೇಡಿ ಮ್ಯಾಕ್‌ಬೆಥ್ ಆಧರಿಸಿದ ನೃತ್ಯ-ನಾಟಕ

ರೆನಾನ್, ಕೊಲ್ಕತ್ತಾ ತಂಡದಿಂದ

**ನಿರ್ದೇಶನ: ವಿಕ್ರಮ್ ಅಯ್ಯಂಗಾರ್**

ಕಥಕ್, ಭರತನಾಟ್ಯಮ್, ಮಣಿಪುರಿ ಮೊದಲಾದ ಭಾರತೀಯ ನೃತ್ಯಪ್ರಕಾರಗಳನ್ನಿಟ್ಟುಕೊಂಡು, ಅವನ್ನು ಸಂಗೀತ ಮತ್ತು ಸಾಹಿತ್ಯದೊಂದಿಗೆ ಕಸಿಮಾಡಿ ಸಮಕಾಲೀನ ಸಂವಹನೆಗೆ ಉಪಯುಕ್ತವೆನ್ನಿಸುವ ನೃತ್ಯ-ನಾಟಕ ಮಾಧ್ಯಮವೊಂದನ್ನು ರೂಪಿಸುವ ಉದ್ದೇಶದೊಂದಿಗೆ ಕೊಲ್ಕತ್ತಾದ ರೆನಾನ್ ಸಂಸ್ಥೆ ರೂಪುತಾಳಿದೆ. ಅಂಥ ಒಂದು ಪ್ರಯೋಗ – ಕ್ರಾಸಿಂಗ್ಸ್.

'ಕ್ರಾಸಿಂಗ್ಸ್' ಕೃತಿಯಲ್ಲಿ ಮೂರು ಪಠ್ಯಗಳು ಒಗ್ಗೂಡಿ ಕೆಲಸ ಮಾಡಿವೆ: ಮೊದಲನೆಯದು – ಶೇಕ್ಸ್‌ಪಿಯರ್ ಕೃತಿ ಮ್ಯಾಕ್‌ಬೆಥ್‌ನ ಪ್ರಸಿದ್ಧ ಸ್ತ್ರೀಪಾತ್ರ ಲೇಡಿ ಮ್ಯಾಕ್‌ಬೆಥ್‌ನ ಸಂಘರ್ಷದ ಕಥನ. ಮ್ಯಾಕ್‌ಬೆಥ್ ರಾಜನಾಗುವನೆಂಬ ಜಕ್ಕಿಣಿಯರ ಭವಿಷ್ಯ ಹೊತ್ತ ಕಾಗದವನ್ನು ಲೇಡಿ ಮ್ಯಾಕ್‌ಬೆಥ್ ಓದುವಲ್ಲಿಂದ ಈ ಕಥನ ಪ್ರಾರಂಭವಾಗಿ, ಅಮೇಲೆ ಆಕೆ ಗಂಡನಿಂದ ಕೊಲೆ ಮಾಡಿಸಿ ತಳಮಳಗೊಂಡ ಆತನನ್ನು ಸಮಾಧಾನಪಡಿಸುವುದು ಹೀಗೆ ಮುಂದುವರೆದು ಅಂತಿಮವಾಗಿ ಲೇಡಿ ಮ್ಯಾಕ್‌ಬೆಥ್ ಸ್ವತಃ ಈ ಸಂಘರ್ಷದಿಂದ ತಲ್ಲಣಗೊಂಡು ಜೀವ ಕಳೆದುಕೊಳ್ಳುವವರೆಗೆ ಈ ಕಥೆ ಹಬ್ಬಿಕೊಂಡಿದೆ. ಈ ಕಥನವನ್ನು ಕಥಕ್ ನೃತ್ಯದ ಮಟ್ಟುಗಳು ಮತ್ತು ಸಂಗೀತದೊಂದಿಗೆ ಈ ಪ್ರಯೋಗ ಸಂಯೋಗಗೊಳಿಸಿ ಪ್ರಸ್ತುತಪಡಿಸುತ್ತದೆ.

ಈ ಪ್ರಯೋಗದಲ್ಲಿ ರಂಗದ ಮೇಲೆ ಕಾಣಿಸಿಕೊಳ್ಳುವ ನಾಲ್ವರು ಅಭಿನೇತ್ರಿಯರು – ದೇಬಾಶಿಶ್ ಭಟ್ಟಾಚಾರ್ಯ, ಅನುಭಾ ಫತೇಪುರಿಯಾ, ಅರ್ಚನಾ ರಾಮಸ್ವಾಮಿ ಮತ್ತು ಸುಮನ್ ಸರಫ್ಗಿ.

**ಸಂಜೆ ೭ ಗಂಟೆಗೆ**

not to be printed

Page 8

**ಅಕ್ಟೋಬರ್ ೧೧ ಶನಿವಾರ**

photo to be printed here
see cd for the photo with this file no.

**11CC08**

ಯಕ್ಷಗಾನ ಪ್ರದರ್ಶನ

## ಸೀತಾ ಕಲ್ಯಾಣ

ತೆಂಕುತಿಟ್ಟಿನ ಆಯ್ದ ಪ್ರಸಿದ್ಧ ಕಲಾವಿದರಿಂದ

**ನಿರ್ದೇಶನ: ಪೃಥ್ವೀರಾಜ ಕವತ್ತಾರ್**

ಕರ್ನಾಟಕದ ಯಕ್ಷಗಾನ ಪರಂಪರೆಯಲ್ಲಿ ತೆಂಕುತಿಟ್ಟಿನ ವೈಶಿಷ್ಟ್ಯಗಳು ಹಲವಾರು. ಆಕರ್ಷಕವಾದ ಬಣ್ಣಗಾರಿಕೆ, ಕಥಾನಕ ಮತ್ತು ಸನ್ನಿವೇಶಗಳ ವೈವಿಧ್ಯ ಮತ್ತು ಅಸಾಧಾರಣ ಶಕ್ತಿಯ ಅತಿಮಾನುಷ ಪಾತ್ರಗಳು – ಇವು ಅಂಥ ವೈಶಿಷ್ಟ್ಯಗಳಲ್ಲಿ ಮುಖ್ಯವಾದವು. ಇಂಥ ವೈಶಿಷ್ಟ್ಯಗಳನ್ನು ಉಳಿಸಿ ಬೆಳೆಸುವ ಪ್ರಯತ್ನದ ಅಂಗವಾಗಿ ರೂಪುಗೊಂಡದ್ದು ಪ್ರಸ್ತುತ ಪ್ರಯೋಗ.

ಪ್ರಸ್ತುತ ಪ್ರಯೋಗದ ಕಥಾನಕ ರಾಮಾಯಣದ ಬಾಲಕಾಂಡದ್ದು – ತಪಸ್ಸಿಗೆ ತೊಂದರೆ ಕೊಡುವ ರಾಕ್ಷಸರ ನಿಗ್ರಹಕ್ಕಾಗಿ ದಶರಥನ ಆಸ್ಥಾನಕ್ಕೆ ವಿಶ್ವಾಮಿತ್ರ ಬಂದು ರಾಮಲಕ್ಷ್ಮಣರನ್ನು ಕರೆದೊಯ್ಯುವುದು, ಬಳಿಕ ಅವರಿಬ್ಬರೂ ರಾಕ್ಷಸರನ್ನು ನಿಗ್ರಹಿಸಿ ಅಹಲ್ಯೋದ್ಧಾರವನ್ನೂ ಮಾಡಿ ಮಿಥಿಲಾ ನಗರಿಗೆ ಹೋಗುವುದು, ಅಲ್ಲಿ ಶಿವಧನುಸ್ಸನ್ನು ಮುರಿದು ಸೀತೆಯನ್ನು ವರಿಸುವುದು, ಆಮೇಲೆ ಮರಳಿ ಅಯೋಧ್ಯೆಗೆ ಬರುವಾಗ ಪರಶುರಾಮನಿಗೆ ಎದುರಾಗುವುದು, ಮೊದಲು ಕೋಪಗೊಂಡರೂ ಆಮೇಲೆ ರಾಮನ ವರ್ಚಸ್ಸಿಗೆ ಮನಸೋತು ಪರಶುರಾಮ ರಾಮನನ್ನು ಅನುಗ್ರಹಿಸುವುದು – ಇದು ಈ ಪ್ರಸಂಗದ ಸ್ಥೂಲವಾದ ಕಥಾಹಂದರ.

ಶ್ರೀಮತಿ ಲೀಲಾವತಿ ಬೈಪಾಡಿತ್ತಾಯ, ಶ್ರೀ ಬಲಿಪ ಪ್ರಸಾದ ಭಾಗವತರು ಹಿಮ್ಮೇಳದಲ್ಲಿ, ಶ್ರೀಯುತರಾದ ಕೆ. ಗೋವಿಂದ ಭಟ್, ಗಂಗಯ್ಯ ಶೆಟ್ಟಿ, ವಿಶ್ವೇಶ್ವರ ಭಟ್ಟ ಸುಣ್ಣಂಬಲ, ಸದಾಶಿವ ಶೆಟ್ಟಿಗಾರ ಮೊದಲಾದ ಹತ್ತಾರು ಪ್ರಸಿದ್ಧ ಕಲಾವಿದರ ಸಹಯೋಗದಲ್ಲಿ ನಡೆಯುವ ಎರಡೂವರೆ ತಾಸಿನ ಈ ಪ್ರದರ್ಶನವು ಇವತ್ತಿನ ತೆಂಕುತಿಟ್ಟಿನ ಹಲವು ಯಕ್ಷಪ್ರತಿಭೆಗಳ ಸಮಾಗಮ.

**ಸಂಜೆ ೭ ಗಂಟೆಗೆ**